ಯುವಿ ಬೆಲೆ ಏಳು ಕೋಟಿಗೆ ಇಳಿಯಿತು.

ಪ್ರತಿ ಹರಾಜಿನಲ್ಲಿಯೂ ಯುವಿ ಉತ್ತಮ ಬೆಲೆ ಪಡೆಯುತ್ತಿದ್ದ ಕಾರಣ ಹೋದ ವರ್ಷ ಕೂಡ ಅವರೇ ಹೆಚ್ಚು ಬೆಲೆ ಪಡೆಯುವ ನಿರೀಕ್ಷೆಯಿತ್ತು. ಆದರೆ ದೇಶಿ ಕ್ರಿಕೆಟ್‌ನಲ್ಲಿ ಗಮನ ಸೆಳೆದಿದ್ದ ದೆಹಲಿಯ ಪವನ್ ನೇಗಿ ಅವರನ್ನು ಡೇರ್‌ಡೆವಿಲ್ಸ್ 8.5 ಕೋಟಿ ರೂಪಾಯಿಗೆ ಖರೀದಿಸಿತು. ಅಂದರೆ ಯುವರಾಜ್‌ಗಿಂತಲೂ 1.5 ಕೋಟಿ ಹೆಚ್ಚು ಹಣ. ಆರಂಭದ ಆವೃತ್ತಿಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿದ್ದ ಪವನ್ ನೇಗಿಗೆ ಈ ಸಲದ ಹರಾಜಿನಲ್ಲಿ ಆರ್‌ಸಿಬಿ ಒಂದು ಕೋಟಿಯಷ್ಟೇ ನೀಡಿದೆ. ಹೋದ ವರ್ಷ ಲಭಿಸಿದ್ದಕ್ಕಿಂತಲೂ ಈಗ 7.5 ಕೋಟಿ ರೂಪಾಯಿ ಹಣ ಕಡಿಮೆ ಸಿಕ್ಕಿದೆ.

ಹೀಗೆ ಅನೇಕ ಅಚ್ಚರಿಗಳು ಐಪಿಎಲ್‌ನಲ್ಲಿ ಈಗೆಲ್ಲಾ ಸಾಮಾನ್ಯವಾಗಿ ಬಿಟ್ಟಿವೆ. ಸಭ್ಯರ ಆಟವೆನಿಸಿರುವ ಕ್ರಿಕೆಟ್ ರಾತ್ರೋ ರಾತ್ರಿ ಸಾಕಷ್ಟು ಆಟಗಾರರನ್ನು ಕೋಟ್ಯಧಿಪತಿಗಳನ್ನಾಗಿ ಮಾಡಿವೆ. ಕರ್ನಾಟಕದ ಕೆ.ಸಿ. ಕಾರಿಯಪ್ಪ 2015ರ ಹರಾಜಿನಲ್ಲಿ 2.4 ಕೋಟಿ ರೂಪಾಯಿಗೆ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಮಾರಾಟವಾಗಿದ್ದರು. ಇಲ್ಲಿಯವರೆಗೂ ಕಾರಿಯಪ್ಪ ಒಂದೂ ಪ್ರಥಮ ದರ್ಜೆ ಪಂದ್ಯವಾಡಿಲ್ಲ. ಆಗ ಆಟಗಾರರ ಹರಾಜು ನಡೆದಾಗ ಕರ್ನಾಟಕ ತಂಡ ಹೊರ ರಾಜ್ಯದಲ್ಲಿ ರಣಜಿ ಪಂದ್ಯವಾಡುತ್ತಿತ್ತು. ರಾಜ್ಯ


ಜ್‌ಸಿಂಗ್


ಪವನ್ ನೇಗಿ

ತಂಡದಲ್ಲಿದ್ದ ಕೆಲ ಕ್ರಿಕೆಟಿಗರಿಗೇ ಕಾರಿಯಪ್ಪ ಯಾರು ಎಂಬುದೇ ಗೊತ್ತಿರಲಿಲ್ಲ. ಈ ಬಾರಿಯ ಹರಾಜಿನಲ್ಲಿ ರಾಜ್ಯದ ಆಫ್‌ಸ್ಪಿನ್ನರ್ ಕೆ. ಗೌತಮ್ 10 ಲಕ್ಷ ಮೂಲಬೆಲೆ ಹೊಂದಿದ್ದರೂ ಮುಂಬೈ ಇಂಡಿಯನ್ಸ್ ಎರಡು ಕೋಟಿ ನೀಡಿತು. ತಮಿಳುನಾಡು ಪ್ರೀಮಿಯರ್ ಲೀಗ್‌ನ ಯಶಸ್ವಿ ಬೌಲರ್ ಟಿ. ನಟರಾಜನ್ ಪಂಜಾಬ್ ತಂಡಕ್ಕೆ ಮೂರು ಕೋಟಿಗೆ ಮಾರಾಟವಾದರು. ಈಗಷ್ಟೇ ಒಂಬತ್ತು ಪ್ರಥಮ ದರ್ಜೆ ಪಂದ್ಯಗಳನ್ನಾಡಿರುವ ನಟರಾಜನ್ 27 ವಿಕೆಟ್‌ಗಳನ್ನಷ್ಟೇ ಪಡೆದಿದ್ದಾರೆ.

ದೇಶಿ ಆಟಗಾರರ ಪಟ್ಟಿಯಲ್ಲಿ ಕೋಟ್ಯಂತರ ಹಣ ಪಡೆದಿರುವ ಕರಣ್ ಶರ್ಮಾ, ನಟರಾಜನ್, ಮುರುಗನ್ ಅಶ್ವಿನ್, ಅನಿಕೇತ್ ಚೌಧರಿ, ಮೊಹಮ್ಮದ್ ಸಿರಾಜ್ ಇವರಲ್ಲಿ ಕೆಲವರು ರಾಷ್ಟ್ರೀಯ ತಂಡದಲ್ಲಿ ಒಂದೂ ಪಂದ್ಯವಾಡಿಲ್ಲ. ಆದರೂ ಇವರೀಗ ಐಪಿಎಲ್ ಸ್ಟಾರ್ ಆಟಗಾರು.

ಇವರಿಗಿಂತಲೂ ಹೆಚ್ಚು ಅನುಭವವಿರುವ ಇಶಾಂತ್ ಶರ್ಮಾ, ಚೇತೇಶ್ವರ ಪೂಜಾರ, ಇರ್ಫಾನ್ ಪಠಾಣ್, ರಾಸ್ ಟೇಲರ್, ಪ್ರಗ್ಯಾನ್ ಓಜಾ. ವೇಯ್ನ್ ಪಾರ್ನೆಲ್, ಇಮ್ರಾನ್ ತಾಹಿರ್ ಹೀಗೆ ಅನೇಕ ಆಟಗಾರರಿಗೆ ಯಾವ ಫ್ರಾಂಚೈಸ್‌ಗಳೂ ನಯಾ ಪೈಸೆ  ನೀಡಿಲ್ಲ! ಕ್ರಿಕೆಟ್ ಪ್ರೇಮಿಗಳಿಗೆ ಇದಕ್ಕಿಂತಲೂ ದೊಡ್ಡ ಅಚ್ಚರಿಯ ಸಂಗತಿ ಇನ್ನೊಂದಿಲ್ಲ.

ಬದಲಾದ ಕ್ರಿಕೆಟ್ ಚಹರೆಯಲ್ಲಿ ಅನುಭವಕ್ಕಿಂತ ಹೆಚ್ಚಾಗಿ ಈಗಿನ ಅವರ ಪ್ರದರ್ಶನ, ತಂಡಕ್ಕೆ ನೆರವಾಗುವ ರೀತಿಯ ಬಗ್ಗೆ ಫ್ರಾಂಚೈಸ್‌ಗಳು ಗಮನ ಕೊಡುತ್ತಿದ್ದಾರೆ. ಫ್ರಾಂಚೈಸ್‌ಗಳ ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ಬಿಟ್ಟರೆ ಆಟಗಾರರ ಮುಂದೆ ಬೇರೆ ಹಾದಿಯಿಲ್ಲ. ಏಕೆಂದರೆ ಹಣವೇ ಮುಖ್ಯವಾಗಿರುವ ಐಪಿಎಲ್‌ನಲ್ಲಿ ಫ್ರಾಂಚೈಸ್‌ಗಳೇ ಸೂತ್ರಧಾರಿಗಳಾದರೆ, ಆಟಗಾರರೇ ಪಾತ್ರಧಾರಿಗಳಾಗಿದ್ದಾರೆ. ■